## ಅಪರೂಪದ ವ್ಯಕ್ತಿ ಪರಿಚಯ

ಟೀವಿ–5 ‘ಬಾಹುಬಲಿ’ಯಲ್ಲಿ ಇತ್ತೀಚೆಗೆ ವಿಧಾನ ಪರಿಷತ್ತಿಗೆ ನೇಮಕವಾದ ಶಾಂತಾರಾಮ ಸಿದ್ದಿ ಪರಿಚಯಿಸುವ ಅಪರೂಪದ ಕಾರ್ಯಕ್ರಮ ಮಾಡಿತು. ಆ ಸಮುದಾಯದಲ್ಲಿ ಪದವಿ ಪಡೆದ ಮೊದಲಿಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಅವರು ತಮ್ಮ ಜನಾಂಗದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ. ಚಿಕ್ಕವಯಸಿನಲ್ಲಿಯೇ ತಂದೆ– ತಾಯಿ ಕಳೆದುಕೊಂಡು ಈ ಮಟ್ಟಿನ ಎತ್ತರಕ್ಕೆ ಬೆಳೆಯುತ್ತಿರುವುದು ಸಂತೋಷ. ನೂರು ರೂಪಾಯಿ ಸಂಬಳದ ನೌಕರಿ ತೊರೆದು, ತಮ್ಮ ಆದಿವಾಸಿ ಜನಾಂಗದ ಅಭಿವೃದ್ಧಿಗಾಗಿ ಶ್ರಮಿಸುವ ಇಂಥವರ ಸಂತತಿ ಸಾವಿರವಾಗಲಿ.

—ಸಿಹಿಮೊಗೆ ರಮೇಶ್, ಮೈಸೂರು

## ಚಂದನವೇ ಪ್ರಿಯ

ಖಾಸಗಿ ವಾಹಿನಿಗಳ ಎರವಲಿನ ನಾಗಿಣಿಯರ ಚೀತ್ಕಾರ, ಅತ್ತೆ– ಸೊಸೆಯರ ಕಿತ್ತಾಟ, ಸುದ್ದಿ ವಾಹಿನಿಗಳ ಅರಚಾಟಗಳಿಂದ ದೂರವಾಗಿ ಸುವಾಸನಾಭರಿತ ಚಂದನ ವಾಹಿನಿಯೇ ನಮಗೀಗ ಪ್ರಿಯವಾಗಿದೆ. ಉತ್ಪ್ರೇಕ್ಷೆ ಇಲ್ಲದ ಸುದ್ದಿಗಳು, ಹಳತಾದರೂ ಮನಮುಟ್ಟುವ ಕಥೆಗಳ ಧಾರಾವಾಹಿಯಿಂದ ಚಂದನ ಮನಕ್ಕೆ ಮುದನೀಡುತ್ತಿದೆ. ಇದಲ್ಲದೆ ಹಿಸ್ಟರಿ ಟೀವಿ, ನ್ಯಾಷನಲ್ ಜಿಯೋಗ್ರಫಿಯ ಪ್ರಕೃತಿ ಪ್ರಪಂಚ, ಡಿಡಿ ನ್ಯಾಷನಲ್ ಹಳೆಯ ಧಾರಾವಾಹಿಗಳು ನಿಜಕ್ಕೂ ಮನತಣಿಸುವ ಹಾಗೂ ಜ್ಞಾನಾರ್ಜನೆ ನೀಡುವ ಕಾರ್ಯಕ್ರಮಗಳು. ಕೊರೊನಾದಿಂದಾಗಿ ಖಾಸಗಿ ವಾಹಿನಿಗಳ ತಲೆಬುಡವಿಲ್ಲದ ಧಾರಾವಾಹಿಗಳಿಂದ ದೂರ ಸರಿಯುವಂತಾಗಿರುವುದು ನಿಜಕ್ಕೂ ಸಂತಸ ತಂದಿದೆ.

—ಗೀತಾ ನೆಲ್ಲೀಕಾಯಿ, ಬೆಂಗಳೂರು

## ದುಷ್ಟ ಪಾಠಶಾಲೆ

ನಮ್ಮನ್ನು ರಂಜಿಸಲು ವಿವಿಧ ಚಾನೆಲ್‌ಗಳಲ್ಲಿ ಹಲವಾರು ಧಾರಾವಾಹಿಗಳು ಪ್ರಸಾರವಾಗತ್ತಿವೆ. ಅವು ಮುಗಿಯದ ಕಥಾನಕಗಳು ಎಂದು ಬೇರೆ ಹೇಳಬೇಕಿಲ್ಲ. ಆದರೆ ಈ ಕಥೆಗಳನ್ನು ಹೆಣೆದು ನಮಗೆ ಉಣಬಡಿಸುವವರ ಮನಃಸ್ಥಿತಿಯನ್ನು ಯೋಚಿಸಿದರೆ ಭಯವಾಗುತ್ತದೆ. ಸಮಾಜಕ್ಕೆ ಅದರಿಂದ ಗುಣಾತ್ಮಕ ಕೊಡುಗೆಯಂತೂ ಖಂಡಿತ ಸಿಗುವುದಿಲ್ಲ. ಅವರು ತಮ್ಮ ಸಂಸಾರದಲ್ಲಿ ಯಾವ ರೀತಿಯ ಮನೋಭಾವದಿಂದ ಇರಬಹುದೆಂದು ಯೋಚಿಸಲೂ ಸಾಧ್ಯವೇ ಇಲ್ಲ ಎನಿಸುತ್ತದೆ. ಇಂಥ ಕ್ರೌರ್ಯದ ಕಥೆಯನ್ನು ನಿಯಂತ್ರಿಸಲು ಯಾವುದೇ ಕಾನೂನು ಇಲ್ಲದಿರುವುದು ವಿಪರ್ಯಾಸವೇ ಸರಿ. ಹೊಸ ಹೊಸ ದುಷ್ಟ ಯೋಚನೆಗಳನ್ನು ಅಮಾಯಕರಿಗೆ ಕಲಿಸುತ್ತಿದ್ದಾರೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

ವಾರದ ಪತ್ರ

## ಗಟ್ಟಿಕಥೆಯ ‘ಗಟ್ಟಿಮೇಳ’

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಗಟ್ಟಿಮೇಳ’ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಮಧ್ಯಮ ವರ್ಗದ ಕುಟುಂಬದ ಕಷ್ಟವನ್ನು ಕಣ್ಣಿಗೆ ಕಟ್ಟುವಂತೆ ತೋರಿಸುತ್ತಿದ್ದಾರೆ ನಿರ್ದೇಶಕರು. ಮಧ್ಯಮ ವರ್ಗ ಹಾಗೂ ಶ್ರೀಮಂತ ಕುಟುಂಬದ ನಡುವಿನ ಸಂಬಂಧಗಳ ಎಳೆಯನ್ನು ಉತ್ತಮವಾಗಿ ತೋರಿಸುತ್ತಿದ್ದಾರೆ. ಮಧ್ಯಮ ವರ್ಗದಲ್ಲಿದ್ದು ನಾಲ್ಕು ಜನ ಹೆಣ್ಣುಮಕ್ಕಳ ತಂದೆ–ತಾಯಿಯಾದರೂ ಸ್ವಾಭಿಮಾನ ಬಿಡದ ಪರಿಮಳ ಹಾಗೂ ಅವಳ ಗಂಡ ಇಂದಿನ ಸಮಾಜಕ್ಕೆ ಮಾದರಿ. ಇರುವುದರಲ್ಲೇ ಖುಷಿಯಿಂದ ಬದುಕುವ ಪರಿಮಳ ಹಾಗೂ ಕುಟುಂಬವನ್ನು ನೋಡಿದರೆ ನಿಜಕ್ಕೂ ಹೆಮ್ಮೆ ಎನ್ನಿಸುತ್ತದೆ.

ಇನ್ನೊಂದೆಡೆ ಶ್ರೀಮಂತ ಮನೆತನದಲ್ಲಿ ಹುಟ್ಟಿದರೂ ಸರಳತೆ ಮರೆಯುವ ಆದ್ಯಾ, ವಿಕ್ರಾಂತ್, ವೇದಾಂತ್ ಹಾಗೂ ಚಿಕ್ಕಮ್ಮನ ಮಕ್ಕಳನ್ನು ತನ್ನ ಸ್ವಂತ ತಂಗಿಯರಂತೆ ಕಾಣುವ ಸಾರ್ಥಕ್ ಈ ಎಲ್ಲಾ ಪಾತ್ರಗಳು ಖುಷಿ ಕೊಡುತ್ತವೆ.

ನಡು ನಡುವೆ ಬಂದು ತನ್ನ ವಿಚಿತ್ರ ನಗುವಿನಿಂದಲೇ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುವ ಕಾಂತ ಪಾತ್ರವೂ ಇಷ್ಟವಾಗುತ್ತದೆ. ಒಟ್ಟಾರೆ ಈ ಧಾರಾವಾಹಿ ಉತ್ತಮ ಸಂದೇಶವುಳ್ಳ ಧಾರಾವಾಹಿ ಎನ್ನಬಹುದು.

—ಸುಷ್ಮಾ ಚೋರಾಡಿ




## ಪ್ರೇಮ ಅಷ್ಟು ಸಲೀಸಾ?

ಸ್ಟಾರ್ ಸುವರ್ಣದ ‘ಸಂಘರ್ಷ’ ಚೆನ್ನಾಗಿ ಮೂಡಿಬರುತ್ತಿದೆ. ಆದರೆ ಐ.ಎ.ಎಸ್. ಮಾಡಿ ಅಸಿಸ್ಟೆಂಟ್ ಕಮಿಷನರ್ ಆದ ಒಬ್ಬ ಹೆಣ್ಣುಮಗಳಿಗೆ ಹಳ್ಳಿಯ ಒಡತಿ ಭೈರಾದೇವಿಯ ಮಗನ ಜೊತೆ ಒಂದೇ ವಾರದಲ್ಲಿ ಪ್ರೇಮ ಆಗಲು ಹೇಗೆ ಸಾಧ್ಯ? ಇದು ಸಮಂಜಸವೆ? ಭೈರಾದೇವಿ ಮಗನೆಂದು ಗೊತ್ತಾದರೆ ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕು.

‘ಮಹಾಭಾರತ’, ‘ರಾಧಾಕೃಷ್ಣ’ ಧಾರಾವಾಹಿಗಳೂ ತುಂಬ ಚೆನ್ನಾಗಿ ಮೂಡಿಬರುತ್ತಿವೆ. ಇನ್ನಷ್ಟು ಇಂಥ ಧಾರಾವಾಹಿಗಳು ಬರಲಿ ಎಂದು ಆಶಿಸುತ್ತೇನೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಸಮಾನ ಅವಕಾಶ ಇರಲಿ

ನ್ಯೂಸ್ ಚಾನೆಲ್‌ಗಳ ಸುದ್ದಿ ಪ್ರಸಾರದಲ್ಲಿ ಇಬ್ಬರು ವಾಚಕರು ಇರುವುದು ಸಾಮಾನ್ಯ. ಒಬ್ಬರಾದ ಮೇಲೆ ಇನ್ನೊಬ್ಬರಂತೆ ಪಾಳಿಯ ಮೇಲೆ ಸುದ್ದಿಯನ್ನು ಓದುತ್ತಾರೆ. ಇದು ಸುದ್ದಿ ಓದುವವರಿಗೆ ಒಂದು ರೀತಿಯ ರಿಲ್ಯಾಕ್ಸ್ ನೀಡುತ್ತದೆ. ಅದು ವೀಕ್ಷಕರಿಗೂ ಮೆಚ್ಚುಗೆ ಆಗುತ್ತದೆ. ಆದರೆ, ಕೆಲವು ಚಾನೆಲ್‌ಗಳಲ್ಲಿ ಸುದ್ದಿ ಓದುವವರು ಇಬ್ಬರಿದ್ದರೂ, ಒಬ್ಬರೇ ಬಹುತೇಕ ಸುದ್ದಿ ಓದುತ್ತಾರೆ. ಸುದ್ದಿಗಿಂತ ತಮ್ಮ ಜ್ಞಾನ ಪ್ರದರ್ಶನ ಮಾಡುತ್ತಾರೆ. ಇನ್ನೊಬ್ಬರು ಕೋಲೆ ಬಸವನಂತೆ ತಲೆ ಆಡಿಸುವುದಕ್ಕೆ ಸೀಮಿತವಾಗಿರುತ್ತಾರೆ. ಸುದ್ದಿ ಓದುವವರು ತ್ರಿಲೋಕ ಮತ್ತು ತ್ರಿಕಾಲ ಜ್ಞಾನಿಗಳಂತೆ ವರ್ತಿಸುವುದು ಸರಿಯಾದ ವರದಿಗಾರಿಕೆಯಲ್ಲ. ಸಹೋದ್ಯೋಗಿ ಜೊತೆ ಕುಳಿತಾಗ ಅವರಿಗೆ ಲೈವ್‌ನಲ್ಲಿ ಮುಜುಗರ ಉಂಟು ಮಾಡುವುದು ಸರಿ ಕಾಣಿಸುವುದಿಲ್ಲ.

—ರಮಾನಂದ ಶರ್ಮಾ, ಬೆಂಗಳೂರು

## ಮಹಾ(ನ್) ಭಾರತ

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿರುವ ‘ಮಹಾಭಾರತ’ ನಿತ್ಯ ಕನ್ನಡಿಗರ ಮನೆ ಮನಗಳಲ್ಲಿ ಹರುಷಾಂಬುಧಿಯನ್ನೇ ಹರಿಸುತ್ತಿದೆ. ಸದಾ ಹಸನ್ಮುಖಿ ತೇಜೋವದನ ಶ್ರೀಕೃಷ್ಣ, ವಸ್ತ್ರಾಪಹರಣದ ವೇಳೆ ವೀಕ್ಷಕರ ಕಣ್ಣು ಹರಿಸಿದ ಪಾಂಚಾಲಿ ಹೆಸರಿಗೆ ಅನ್ವರ್ಥವೆನಿಸುವ ಅಜಾನುಬಾಹು ಬಲಭೀಮ, ‘ಮಗುವೇ’ ಎನ್ನುತ್ತಾ ಒಂದು ಕಣ್ಣ ಮುಚ್ಚಿ ಕುಂಟುತ್ತಾ ಕರಾಮತ್ತು ನಡೆಸುವ ಶಕುನಿ, ಪ್ರತಿ ಪಾತ್ರಧಾರಿಗಳ ಅಭಿನಯ ಅದ್ಭುತ. ಅದ್ಭುತ ದೃಶ್ಯಕಾವ್ಯವನ್ನು ಉಣಬಡಿಸುತ್ತಿರುವ ತಂಡಕ್ಕೆ ಕೃತಜ್ಞತೆಗಳು. ಇತ್ತೀಚಿನ ಕೆಲವು ಸಂಚಿಕೆಗಳಲ್ಲಿ ಅನಗತ್ಯವಾಗಿ ಕೃಷ್ಣನ ಬಾಲ್ಯ, ಕಂಸವಧೆ ಹಿಂಜಿದುದು ಸರಿ ಕಾಣಲಿಲ್ಲ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಅಮೋಘ ರಾಮಕ್ಕ

ಕಲರ್ಸ್ ಕನ್ನಡದಲ್ಲಿ ಈಚೆಗೆ ‘ಹೆಬ್ಬೆಟ್ಟು ರಾಮಕ್ಕ’ ಸಿನಿಮಾ ಪ್ರಸಾರವಾಯಿತು. ತಾರಾ ಅವರ ಅಭಿನಯ ಅಮೋಘ. ಇದು ಸಾಕ್ಷರತೆ ಹಾಗೂ ಭ್ರಷ್ಟ ಅಧಿಕಾರಿಗಳ ಕುರಿತಾಗಿದ್ದು. ಸಿನಿಮಾ ಮುಗಿದಿದ್ದೇ ಗೊತ್ತಾಗಲಿಲ್ಲ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು